ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

**ಸಿ. ಸಿ. ಸಂಖ್ಯೆ 378/2021** **ಸಿ.ಡಬ್ಲ್ಯೂ 08, ಪಿ.ಡಬ್ಲ್ಯೂ 03**

ಸಾಕ್ಷಿಯ ಹೆಸರು - ರಜನಿಕಾಂತ
ತಂದೆಯ ಹೆಸರು - ಮರಳಪ್ಪ
ವಯಸ್ಸು - 43 ವರ್ಷ
ಉದ್ಯೋಗ - ವ್ಯವಸಾಯ
ವಾಸ ಸ್ಥಳ - ಕೂಡ್ಲಿಗಿ

ದಿನಾಂಕ 11-12-2023 ರಂದು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆ ಸಸಅ ರವರಿಂದ**

* * * *

ದಿಃ 24-07-2021 ರಂದು ನಾನು ಮತ್ತು ನಮ್ಮ ಸ್ನೇಹಿತ ನಾಗರಾಜ ಎನ್ನುವರು ಕೆಲಸದ ವಿಚಾರವಾಗಿ ಮದ್ಯಾಹ್ನ 2.30 ರ ಸಮಯದಲ್ಲಿ ಕಾರನಲ್ಲಿ ಹೋಗುತ್ತಿದ್ದೆವು ನಮ್ಮ ಕಾರಿನ ಮುಂದೆ ಸ್ಪೆಲಂಡರ್ ಬೈಕ ನ್ನು ಒಬ್ಬ ವ್ಯಕ್ತಿ ಹೆಲ್ಮಟ ಹಾಕಿಕೊಂಡು ನಿಧಾನವಾಗಿ ಚಲಾಯಿಸಿಕೊಂಡು ಎಡಬದಿಯಲ್ಲಿ ಹೋಗುತ್ತಿದ್ದರು. ಎದುರುಗಡೆಯಿಂದ ಆಶೋಕ ಲೈಲ್ಯಾಂಡ ಲಾರಿಯ ಚಾಲಕ ಅತೀವೇಗವಾಗಿ ಮತ್ತು ನಿರ್ಲಕ್ಷನದಿಂದ ನಡೆಸಿಕೊಂಡು ಬಂದು ಬೈಕ ಗೆ ಬಂಡ್ರಿ ಮಾರೆಮ್ಮ ಗುಡಿಯ ಹತ್ತಿರ ಡಿಕ್ಕಿ ಪಡೆಸಿರುತ್ತಾನೆ. ಮೋಟರ ಸೈಕಲ್ ನಂಃ ಕೆಎ 35 8793 ಎಂದು ಇರುತ್ತದೆ ಮುತ್ತ ಲಾರಿ ನಂಃ ಕೆಎ 35/ 6141 ಇರುತ್ತದೆ. ಆಗ ನಾವು ಘಟನಾ ಸ್ಥಳದಲ್ಲಿ ನಮ್ಮ ಕಾರನ್ನು ನಿಲ್ಲಿಸಿ ನೋಡಿದಾಗ ಸದರಿ ಅಪಘಾತದಲ್ಲಿ ಬಿದಿದ್ದ ವ್ಯಕ್ತಿ ನಮ್ಮ ಪರಿಚಯಸ್ಥ ಬಸವರಾಜ ಎನ್ನುವರು ಗೊತ್ತಾಯಿತು. ಆತನ ಎದೆಗೆ, ಮೋಣಕಾಲಿಗೆ, ಹೊಟ್ಟೆಯ ಮೇಲೆ ಗಾಯಗಳು ಆಗಿದ್ದುವು ಮತ್ತು ಅವರು ಮರಣ ಹೊಂದಿರುತ್ತಾರೆ. ನಂತರ ಅವರ ಬಳಿ ಇದ್ದ ಮೋಬೈಲ್ ನ್ನು ತೆಗೆದುಕೊಂಡು ಚಾಸಾ 1 ರವರಿಗೆ ಕರೆಯನ್ನು ಮಾಡಿದಾಗ ಅವರಿಗೆ ಸದರಿ ಘಟನೆಯ ವಿಚಾರವನ್ನು ಫೋನ್ ಮುಖಾಂತರ ತಿಳಿಸಿರುತ್ತೇನೆ. ಆಗ ಅವರು ಬಸ್ಸನಲ್ಲಿ ಬಂಡ್ರಿಯನ್ನು ದಾಟಿಕೊಂಡು ಸಂಡೂರಗೆ ಹೋಗುತ್ತಿರುವುದು ತಿಳಿಸಿದರು ಮತ್ತು ಅವರು ವಾಪಸ್ಸು ಬರುವುದಾಗಿ ತಿಳಿಸಿರುತ್ತಾರೆ. ನಂತರ ಘಟನಾ ಸ್ಥಳಕ್ಕೆ ಸ್ವಲ್ಪ ಹೊತ್ತಿನ ನಂತರ ಬಂದಿರುತ್ತಾರೆ. ಆಗ ಅವರನ್ನು ನಾವು ಸಮಾಧಾನ ಮಾಡಿದೆವು ಮತ್ತು ಆರೋಪಿಯು ತಾನು ತಪ್ಪ ಮಾಡಿರುವುದಾಗಿ ವಿನಂತಿಸಿಕೊಂಡಿರುತ್ತಾನೆ. ಸ್ವಲ್ಪ ಹೊತ್ತಿನ ನಂತರ ಪೋಲಿಸರು ಘಟನಾ ಸ್ಥಳಕ್ಕೆ ಬಂದಿರುತ್ತಾರೆ. ಪೋಲಿಸರಿಗೆ ಘಟನಾ ಸ್ಥಳವನ್ನು ತೋರಿಸಿರುತ್ತೇನೆ ಮತ್ತು ಪೋಲಿಸರು

ನಮ್ಮ ಸಮಕ್ಷಮ ಪಂಚನಾಮೆಯನ್ನು ಮತ್ತು ಕಚ್ಚಾ ನಕಾಶೆಯನ್ನು ಮಾಡಿರುತ್ತಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ 1 ಎಂದು ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 1 ಬಿ ಕಚ್ಚಾ ನಕಾಶೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು. ಅಂಬ್ಯೂಲೇನ್ಸ ನಲ್ಲಿ ಮೃತ ಬಸವರಾಜ ರವನ್ನು ಕೂಡ್ಲಿಗಿ ಸರಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ಪೋಲಿಸರು ಘಟನೆಯ ಬಗ್ಗೆ ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ನಿಪಿ 3 ರಿಂದ 7 ರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್ ಯು ಎನ್ ವಕೀಲರಿಂದ.**

ಚಾಸಾ 1 ನಮ್ಮ ಸಂಬಂಧಿಕರು ಎಂದರೆ ಸರಿಯಲ್ಲ ಆದರೆ ಅವರು ನಮಗೆ ಪರಿಚಯವಿರುತ್ತಾರೆ. ಮೃತ ವ್ಯಕ್ತಿಯ ಮೋಬೈಲ್ ಮುಖಾಂತರ ಚಾಸಾ 1 ರವರಿಗೆ ತಿಳಿಸಿರುತ್ತೇವೆ ಆದರೆ ಸದರಿ ಮೋಬೈಲ್ ಯಾವುದು ಎಂದು ನನಗೆ ಗೊತ್ತಿರುವುದಿಲ್ಲ. ಚಾಸಾ 1 ರವರಿಗೆ ಘಟನೆಯ ವಿಚಾರವಾಗಿ ಫೋನ್ ಮುಖಾಂತರ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಘಟನೆಯ ದಿನ ನಮ್ಮ ಸ್ನೇಹಿತನ ಸೀಪ್ಟ ಡಿಜಾಯರ್ ಕಾರನಲ್ಲಿ ಹೋಗುತ್ತಿದ್ದೆವು ಆದರೆ ಅದರ ನಂಬರ ನನಗೆ ಗೊತ್ತಿರವುದಿಲ್ಲ. ಸದರಿ ದಿನ ನಾನು ಕಾರನಲ್ಲಿ ಹೋಗುತ್ತಿರುವುದಿಲ್ಲ ಮತ್ತು ಸದರಿ ಅಪಘಾತವನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆಯ ದಿನ ಪೋಲಿಸರು ಸಂಜೆ 5 ರ ಸಮಯಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ. ಮರು ದಿನ ಪೋಲಿಸರಿಗೆ ಘನೆಯ ಬಗ್ಗೆ ಹೇಳಿರುತ್ತೇನೆ.

ಘಟನಾ ಸ್ಥಳದ ಚೆಕ್ ಬಂದಿ ಪೂರ್ವಕ್ಕೆ ಸಂಡೂರು ರಸ್ತೆ, ಪಶ್ಚಿಮಕ್ಕೆ ಕೂಡ್ಲಿಗಿ ರಸ್ತೆ ಉತ್ತರ ಮತ್ತು ದಕ್ಷಿಣಕ್ಕೆ ಜಮೀನುಗಳು ಇರುತ್ತವೆ. ಸದರಿ ಜಮೀನುಗಳು ಯಾರಿಗೆ ಸಂಬದಪಟ್ಟ ಜಮೀನು ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ 1 ಮತ್ತು 2 ನ್ನು ತಯಾರು ಮಾಡುವಾಗ ನಾನು, ಚಾಸಾ 2, 3, 18 ಮತ್ತು ಇತರರು ಇದ್ದರು. ಘಟನಾ ಸ್ಥಳದಲ್ಲಿ ಲಾರಿಯು ಎಡಬದಿಯಲ್ಲಿ ಹೋಗುತ್ತಿತ್ತು ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ರಸ್ತೆ ತೀರುವಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ರಸ್ತೆ ತೀರುವಿನಿಂದ ಕೂಡಿದ ಕಾರಣ ಯಾವುದೆ ವಾಹನಗಳು ವೇಗವಾಗಿ ಬರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವನ್ನು 150 ಅಡಿಗಳ ಅಂತರದಲ್ಲಿ ನಾನು ನೋಡಿರುತ್ತೇನೆ. ನಿಪಿ 1 ಮತ್ತು 2 ಕ್ಕೆ ಘಟನಾ ಸ್ಥಳದಲ್ಲಿ ಸಹಿಯನ್ನು ಮಾಡಿರುತ್ತೇನೆ. ಘಟನಾ ಸ್ಥಳದಲ್ಲಿ ನಾನು ಇರಲಿಲ್ಲ ಅಪಘಾತವನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಮೃತ

ವ್ಯಕ್ತಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಿಪಿ 1 ಮತ್ತು 2 ನ್ನು ಠಾಣೆಯಲ್ಲಿ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಯಾವುದೆ ತಪ್ಪನ್ನು ಮಾಡದೆ ಇದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರ.ದ.ನ್ಯಾ.ದಂ., ಸಂಡೂರು.**

**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.**

**ಸಿ. ಸಿ. ಸಂಖ್ಯೆ 378/2021** **ಸಿ.ಡಬ್ಲೂ 01, ಪಿ.ಡಬ್ಲೂ 02**

| | | |
|---|---|---|
| ಸಾಕ್ಷಿಯ ಹೆಸರು | - ಮಿನಾಕ್ಷೀ | ದಿನಾಂಕ 11-12-2023 |
| ಗಂಡನ ಹೆಸರು | - ಸಂತೋಷ | ರಂದು ಪ್ರಮಾಣ ವಚನ |
| ವಯಸ್ಸು | - 27 ವರ್ಷ | ಮಾಡಿಸಲಾಯಿತು. |
| ಉದ್ಯೋಗ | - ಖಾಸಗಿ ಕಂಪನಿಯಲ್ಲಿ ಕೆಲಸ | |
| ವಾಸ ಸ್ಥಳ | - ಬೆಂಗಳೂರು | |

**ಮುಖ್ಯ ವಿಚಾರಣೆ ಸಸಅ ರವರಿಂದ**

* * * *

ದಿಃ 24-07-2021 ರಂದು ಮದ್ಯಾಹ್ನ 1.45 ರ ಸುಮಾರಿಗೆ ನಾನು ಮತ್ತು ನಮ್ಮ ತಾಯಿ ಮಲ್ಲಮ್ಮ ಸೇರಿ ಬಸ್ಸನಲ್ಲಿ ಕೂಡ್ಲಿಗಿಯಿಂದ ಸಂಡೂರಿಗೆ ಬಸ್ಸನಲ್ಲಿ ಬರುತ್ತಿರುವಾಗ ನಮ್ಮ ತಂದೆ ಬಸವರಾಜ ಕೆ ಅವರು ಕೂಡ್ಲಿಗಿ ಬಸ್ಸ ಸ್ಟಾಂಡ ಗೆ ಬಂದು ನಮ್ಮನ್ನು ಬಸ್ಸಗೆ ಹತ್ತಿಸಿ ನಮ್ಮ ತಂದೆ ತಮ್ಮ ಮೋಟರ ಸೈಕಲ್ ನಂಃ ಕೆಎ 35 ಇಬಿ 8793 ನ್ನು ತೆಗೆದುಕೊಂಡು ಸಂಡೂರಗೆ ಬರುವಾಗ ಮದ್ಯಾಹ್ನ 2.30 ರ ಸಮಯದಲ್ಲಿ ಲಾರಿ ಚಾಲಕ ಲಾರಿ ನಂಃ ಕೆಎ 35 ಸಿ 6141 ನ್ನು ಅತೀವೇಗವಾಗಿ ನಡೆಸಿಕೊಂಡು ಬಂದು ಗಂಡಿಮಾರೆಮ್ಮ ಗುಡಿಯ ಹತ್ತಿರ ಅಪಘಾತ ಆದ ವಿಚಾರವನ್ನು ಚಾಸಾ 8 ರವರು ಪೋನ ಮುಖಾಂತರ ನಮಗೆ ತಿಳಿಸಿರುತ್ತಾರೆ. ತದನಂತರ ನಾವು ಘಟನಾ ಸ್ಥಳಕ್ಕೆ ನಾನು ಮತ್ತು ನಮ್ಮ ತಾಯಿ ಚಾಸಾ 9 ರವರು ಘಟನಾ ಸ್ಥಳಕ್ಕೆ ಹೋಗಿ ನೋಡಿದಾಗ ನಮ್ಮ ತಂದೆ ಘಟನಾ ಸ್ಥಳದಲ್ಲಿ ಮೃತವಾಗಿದ್ದು ನಮಗೆ ತಿಳಿದುಬಂದಿರುತ್ತದೆ. ಆಗ ನಾನು ಕೂಡ್ಲಿಗಿ ಪೋಲಿಸ ಠಾಣೆಗೆ ಅದೇ ದಿನ ಮದ್ಯಾಹ್ನ 3.30 ರ ಸಮಯದಲ್ಲಿ ಪೋಲಿಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸದರಿ ಅಪಘಾತವು ಆರೋಪಿಯು ತನ್ನ ಲಾರಿಯನ್ನು ಅತೀವೇಗವಾಗಿ ನಡೆಸಿಕೊಂಡು ಬಂದಿದ್ದರಿಂದ ಆಗಿರುತ್ತದೆ. ನಾವು ಘಟನಾ ಸ್ಥಳದಲ್ಲಿ ನಮ್ಮ ತಂದೆಯನ್ನು ನೋಡಿದಾಗ ಅವರ ಎದೆಗೆ, ಮೋಣಕಾಲಿಗೆ, ಹೊಟ್ಟೆಯ ಮೇಲೆ ಗಾಯಗಳು ಆಗಿದ್ದು ಕಂಡು ಬಂದಿರುತ್ತದೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು ಸಾಕ್ಷಿಯ ಸಹಿಯನ್ನು ನಿಪಿ 9 ಎ ಎಂದು ಗುರುತಿಸಲಾಯಿತು. ನಾನು ಘಟನಾ ಸ್ಥಳಕ್ಕೆ ಹೋದಾಗ ಆರೋಪಿಯು ಅಲ್ಲಿಯೆ ಇದ್ದನು. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್ ಯು ಎನ್ ವಕೀಲರಿಂದ.**

ನಾನು ದೂರನ್ನು ಕಂಪ್ಯೂಟರನಲ್ಲಿ ಟೈಪ ಮಾಡಿಸಿ ನೀಡಿರುತ್ತೇನೆ. ದೂರನ್ನು ನಾನೇ ಹೇಳಿ ಬರೆಸಿರುತ್ತೇನೆ. ಸದರಿ ಅಪಘಾತವಾದಾಗ ನಾವು ಹೋಗುತ್ತಿದ್ದ ಬಸ್ಸನ ಮುಂದಿನ ಸಿಟ್ ನಲ್ಲಿ ಕುಳತ್ತಿದ್ದು ನಾವು ನೋಡಿರುತ್ತೇವೆ ಆದರೆ ಸದರಿ ಅಪಘಾತವು ನಮ್ಮ ತಂದೆಗೆ ಆಗಿರುತ್ತದೆ ಎಂದು ನಮಗೆ ಗೊತ್ತಿರುವುದಿಲ್ಲ. ಸದರಿ ಅಪಘತವು ಸಹ ನಾನು ನೇರವಾಗಿ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ ೨ ರಲ್ಲಿ ಅಪಘಾತವಾಗಿರುವುದನ್ನು ನಾನು ನೋಡಿರುವ ಬಗ್ಗೆ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ಅಪಘಾತವಾದ ದಿನ ಲಾರಿ ಯಾವ ರೀತಿ ಬರುತ್ತಿತ್ತು ಎಂದು ನಾನು ನೋಡಿರುವುದಿಲ್ಲ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ತೀರುವು ಇರುತ್ತದೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ತೀರುವು ಇದಿದ್ದರಿಂದ ವೇಗವಾಗಿ ವಾಹನಗಳು ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ತನ್ನ ವಾಹನವನ್ನು ರಸ್ತೆಯ ಎಡಭಾಗದಲ್ಲಿ ಚಲಾಯಿಸಿಕೊಂಡು ಹೋಗುತ್ತಿದ್ದನು ಎಂದರೆ ಸರಿಯಲ್ಲ. ನಮ್ಮ ತಂದೆ ಬಲಗಡೆಗೆ ವಾಹನವನ್ನು ತೆಗೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ ಕಾರಣ ನಾನು ಅದನ್ನು ನೋಡಿರುವುದಿಲ್ಲ. ನಮ್ಮ ತಂದೆ ಮೃತ ಹೊಂದಿರುವ ಕಾರಣ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಆರೋಪಿ ಯಾವುದೆ ತಪ್ಪನ್ನು ಮಾಡದೆ ಇದ್ದರು ನಮ್ಮ ತಂದೆಯ ಪರಿಹಾರಕ್ಕಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರ.ದ.ನ್ಯಾ.ದಂ., ಸಂಡೂರು.**